# ರಾಷ್ಟ್ರಪಿತ

ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (Answer the following)

೧. ನಮ್ಮ ದೇಶ ಯಾವುದು?

ಉ: ನಮ್ಮ ದೇಶ ಭಾರತ.

೨. ನಮ್ಮ ದೇಶದ ರಾಷ್ಟ್ರಪಿತ ಯಾರು?

ಉ: ನಮ್ಮ ದೇಶದ ರಾಷ್ಟ್ರಪಿತ ಮಹಾತ್ಮ ಗಾಂಧಿ.

೩. ಮಹಾತ್ಮ ಗಾಂಧಿಯವರು ಹುಟ್ಟಿದ್ದು ಎಲ್ಲಿ? ಯಾವಾಗ?

ಉ: ಮಹಾತ್ಮ ಗಾಂಧಿಯವರು ಹುಟ್ಟಿದ್ದು ಅಕ್ಟೋಬರ್ ೨ರಂದು, ಪೋರಬಂದರುನಲ್ಲಿ ಜನಿಸಿದರು.

FOR KANNADA
ಕನ್ನಡದಲ್ಲಿ

೪. ಮಹಾತ್ಮ ಗಾಂಧಿಯವರ ತಾಯಿ ತಂದೆಯರು ಯಾರು?

ಉ: ಮಹಾತ್ಮ ಗಾಂಧಿಯವರ ತಾಯಿ ಪುತಲೀಬಾಯಿ, ತಂದೆ ಕರಮಚಂದ ಗಾಂಧಿ.

೫. ಮಹಾತ್ಮ ಗಾಂಧಿಯವರು ಹೆಂಡತಿಯ ಹೆಸರು ಏನು?

ಉ: ಮಹಾತ್ಮ ಗಾಂಧಿಯವರು ಹೆಂಡತಿಯ ಹೆಸರು ಕಸ್ತೂರಬಾ.

೬. ಮಹಾತ್ಮ ಗಾಂಧಿಯವರ ಅಸ್ತ್ರಗಳು ಯಾವುವು?

ಉ: ಮಹಾತ್ಮ ಗಾಂಧಿಯವರ ಅಸ್ತ್ರಗಳು ತ್ಯಾಗ, ಅಹಿಂಸೆ.

೭. ಮಹಾತ್ಮ ಗಾಂಧಿಯವರು ಯಾವಾಗ ಮರಣ ಹೊಂದಿದರು?

ಮಹಾತ್ಮ ಗಾಂಧಿಯವರು ಜನವರಿ ೩೦, ೧೯೪೮ರಂದು ಮರಣ ಹೊಂದಿದರು.

೮. ಗಾಂಧೀಜಿಯವರ ಪೂರ್ಣ ಹೆಸರೇನು?

ಉ: ಗಾಂಧೀಜಿಯವರ ಪೂರ್ಣ ಹೆಸರು ಮೋಹನದಾಸ ಕರಮಚಂದ ಗಾಂಧಿ.

೯. ಅವರನ್ನು ರಾಷ್ಟ್ರಪಿತ ಎಂದು ಯಾವಾಗ ಕರೆಯಲಾಯಿತು?

ಉ: ಅವರನ್ನು ರಾಷ್ಟ್ರಪಿತ ಎಂದು ಜುಲೈ ೬, ೧೯೪೪ರಂದು ಕರೆಯಲಾಯಿತು.

ಆ. ಪದಗಳ ಅರ್ಥ ಬರೆಯಿರಿ. (Write the word meaning)

ಪಿತ = ತಂದೆ, ಜನಕ (Father)

ಮಿತ್ರ = ಗೆಳೆಯ, ಸ್ನೇಹಿತ (Friend)

ನೇತ = ನಾಯಕ (Leader)

ಅಸ್ತ್ರ = ಆಯುಧ (Weapon)

ಹಿಂಸೆ = ಹಾನಿ,ಕೇಡು (Violence)

ದೊರೆ = ರಾಜ, ಅರಸ (King)

I FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (Answer the following in one sentence)

೧. ಬಿಳಿಯ ದೊರೆ ಯಾವುದಕ್ಕೆ ಸೋತ?

ಉ: ಬಿಳಿಯ ದೊರೆ ನಗೆಯ ಅಸ್ತ್ರಕ್ಕೆ ಸೋತ.

೨. ಗಾಂಧಿ ತಾತ ಹೇಗೆ ಸರಳ ಬದುಕು ನಡೆಸಿದರು?

ಉ: ಗಾಂಧಿ ತಾತ ಬಡವರಲ್ಲಿ ಸೇರಿಕೊಂಡು ಸರಳ ಬದುಕು ನಡೆಸಿದರು.

೩. ಹಿಂಸೆಯೆಂಬ ಮಾತು ಯಾರಲ್ಲಿ ಇಲ್ಲ?

ಉ: ಹಿಂಸೆಯೆಂಬ ಮಾತು ಗಾಂಧೀಜಿಯವರಲ್ಲಿ ಇಲ್ಲ.

೪. ಗಾಂಧಿತಾತ ಹೇಗೆ ಆಂಗ್ಲರನ್ನು ಜಯಿಸಿದರು?

ಉ: ಗಾಂಧಿತಾತ ನಗೆಯ ಬಲೆಯ ಬೀಸಿ ಆಂಗ್ಲರನ್ನು ಜಯಿಸಿದರು.

ಈ. ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ. (Complete the poem)

ಮಿತ್ರನಿರಲಿ ಶತ್ರುವಿರಲಿ
ಹಿಂಸೆ ಎಂಬ ಮಾತೆ ಇಲ್ಲ
ಪುಟ್ಟ ಮಗು ಕಂಡರ ವಗೆ
ಬಾಯಿ ತುಂಬಾ ಬೆಲ್ಲ |

ಸತತ ನಗುತ ಎಲ್ಲರೊಂದೇ
ಎನುತ ಬದುಕಿದ
ನಗೆಯ ಬಲೆಯ ಬಿಸಿ ಬಿಸಿ
ಆಂಗ್ಲರನ್ನು ಜಯಿಸಿದ |

ಉ. ಬಿಟ್ಟ ಸ್ಥಳ ತುಂಬಿರಿ. (Fill in the blanks)

೧. ಜನರ ಕಷ್ಟ ಕಂಡುಕೊಂಡು ಅಂಗಿ ಕೂಡ ಕಳಚಿದ.

೨. ಪುಟ್ಟ ಮಗು ಕಂಡರವಗೆ ಬಾಯಿ ತುಂಬಾ ಬೆಲ್ಲ.

೩. ಸತತ ನಗುತ ಎಲ್ಲರೊಂದೆ ಎನ್ನುತ ಬದುಕಿದ.

೪. ರಾಷ್ಟ್ರಪಿತ ಪದ್ಯದ ಕವಿ ಟಿ. ಎಸ್. ನಾಗರಾಜ ಶೆಟ್ಟಿ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಊ. ಈ ಪದ್ಯದಲ್ಲಿ ಬರುವ ಐದು ಪ್ರಾಸ ಪದಗಳನ್ನು ಬರೆಯಿರಿ. (Write the rhyming words)

ನೇತ - ಸೋತ

ಇಲ್ಲ - ಬೆಲ್ಲ

ಬದುಕಿದ - ಜಯಿಸಿದ

ಕಂಡುಕೊಂಡ - ಸೇರಿಕೊಂಡ

ರಾಷ್ಟ್ರಪಿತ - ಜೀವದಾತ

ಋ. ಮಾದರಿಯಂತೆ ಬರೆಯಿರಿ. (Write as per the example given)

ಕಲಿ – ಕಲಿಯಿರಿ

ತಿಳಿ - ತಿಳಿಯಿರಿ

ಆಡಿ - ಆಡಿರಿ

ಹಾಡಿ - ಹಾಡಿರಿ

ಕುಣಿ – ಕುಣಿಯಿರಿ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಎ: ಕೊಟ್ಟಿರುವ ಕನ್ನಡ ಪದಗಳಿಗೆ ಇಂಗ್ಲೀಷ್ ನಲ್ಲಿ ಅರ್ಥ ಬರೆಯಿರಿ. (Write the English word meaning)

ತಾತ = Grandfather

ರಾಷ್ಟ್ರ = Country

ಅಸ್ತ್ರ = Weapon

ದೊರೆ = King

ಜನರು = people

ಸರಳ = Simple

ಶತ್ರು = Enemy

ಹಿಂಸೆ = Violence

ಜಯಿಸು = Victory

ಬಡವ = Poor person

ಏ: ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಅದೇ ರೀತಿ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬಿಟ್ಟ ಜಾಗದಲ್ಲಿ ಬರೆಯಿರಿ.

(Note the relationship between the first two words, similarly write the word related to the third word in the space provided)

FOR KANNADA

ತಂದೆ : ತಾಯಿ :: ತಾತ : ಅಜ್ಜಿ

ಗಂಡ : ಹೆಂಡತಿ :: ಮಾವ : ಅತ್ತೆ

ರಾಜ : ರಾಣಿ :: ಸೇವಕ : ಸೇವಕಿ

ಹುಡುಗ : ಹುಡುಗಿ :: ತರುಣ : ತರುಣಿ

ದೊಡ್ಡಪ್ಪ : ದೊಡ್ಡಮ್ಮ :: ಚಿಕ್ಕಪ್ಪ : ಚಿಕ್ಕಮ್ಮ